ಇಸ್ಮಾಯಿಲ್ ಜಬೀರ್ ಬಾವಾಜಿ, ವಿಜಯನಗರ ಜಿಲ್ಲೆಯ ಹೂವಿನ ಹಡಗಲಿಯವರು. 'ಮೌಖಿಕ ಪರಂಪರೆ ಮತ್ತು ಚರಿತ್ರೆ' ಅವರ ಸಂಶೋಧನಾ ಕೃತಿ. ಅನುವಾದ ಅವರ ಆಸಕ್ತಿಯ ಮತ್ತೊಂದು ಪ್ರಕಾರ.

ಮರ ಹತ್ತಿ ಗರಿ ಕೊಯ್ದು, ಹೊರಿ ಕಟ್ಟಿ ಕೊಡ್ತಿದ್ದ, ಈಚಲ ಗಿಡದ ಬಡ್ಡಿಯಿಂದಿ ಎಳೇ ಕೊಬ್ಬರಿ ತೆಗೆದು ಕೊಡ್ತಿದ್ದ, ಹಿರೇಹಳ್ಳದಾಗ ನೀರು ತಂದು ಕುಡಿಸ್ತಿದ್ದ, ಒಮ್ಮೆ ಅತೀ ಜ್ವರ ಇದ್ರೂ ಇಬ್ರೂ ಗರಿಗೆ ಹೋದಾಗ ಹಳ್ಳದ ನೀರಲ್ಲಿರೋ ಏಡಿಗಳನ್ನು ಹಿಡ್ದು ಸುಟ್ಟು ತಿಂದುದು, ಗೌರಿ ಹುಣ್ವೆಗೆ ಪೈಟ ಲಂಗ ಕೊಡ್ಸಿದ್ದು, ಅದು ಅವರಪ್ಪಗ ಗೊತ್ತಾಗಿ ಆಕಿ ಎಡಗಾಲಿನ ಮೀನಖಂಡಕ್ಕೆ ಬೀಡಿಯಿಂದ ಸುಟ್ಟಿದ್ದು... ಹೀಗೆ ಒಮ್ಮೆಗೇ ಆಕಿ ಮನಸ್ನ್ಯಾಗ ನೆನಪಿನ ಬುತ್ತಿ ಬಿಚ್ಕೊಂಡ್ತು. ಪಕ್ಕಾ, 'ಲೇ ಇಬ್ರೂ ಎಲ್ಲಾದ್ರೂ ಓಡಿಹೋಗನ್ನಡಿ. ನಾನು ಏನಾದ್ರು ಕೆಲ್ಸಾ ಮಾಡಿ ನಿನಿಗೆ ಸಾಕ್ತೀನಿ ನನಿಗೆ ಅಷ್ಟೂ ಯೋಕ್ತಿ ಇಲ್ಲೇನು?' ಎಂದು ಹಗಲೆಲ್ಲಾ ಕಾಡ್ಸಿದ್ದು ನೆನಪಾಗಿ ಬಸ್ವಿ ತಲೀ ಒಡೆದೇ ಹೋಯ್ತು ಅನ್ನಂಗಾಯ್ತು ಆಕಿಗೆ. ಇವರಿಬ್ಬರ ವಿಷಯ ಅವರಪ್ಪಗ ಗೊತ್ತಾಗಿ ಒಂದು ವಾರದಲ್ಲೇ ಭರಮಪ್ಪಗ ಮದುವಿ ಮಾಡಿಕೊಟ್ಟಿದ್ದ. ಹೀಗೆ ತನ್ನ ಹಳೆಯ ನೆನಪುಗಳನ್ನು ಮೆಲುಕಿ ಹಾಕ್ತಿದ್ದಂಗೆ ಅವಳಿಗೆ ಬೆಟ್ಟದಷ್ಟಿದ್ದ ಸಮಸ್ಯೆಗಳ ಅರಿವಾಗಿ, ಇಷ್ಟೆಲ್ಲಾ ಕಷ್ಟ ತನ್ನಪ್ಪನಿಂದಲೇ ಎಂದು ತನ್ನಪ್ಪನಿಗೆ ಬೈಯುತ್ತಾ, ಕಂಬಕ್ಕೊರಗಿ ಕೂತಿದ್ದವಳಿಗೆ ತಾನು ಕಂಬವೇ ಆಗಿಬಿಟ್ಟೆನೇನೋ ಎನಿಸಿತು. ಬೆಳಿಗ್ಗೆ ಹುಲ್ಲಿಗೆ ಹೋದಾಗ ತಂದಿದ್ದ ಈಚಲ ಕೊಬ್ರಿಯನ್ನೇ ತಿಂದು ಮಲಗಿದ್ದ ಮಕ್ಕಳು, ಬಸ್ವಿಗೆ ಒಣಗಿದ ಈಚಲ ದಿಮ್ಮಿಗಳಂತೆಯೇ ಕಾಣಿಸ್ತಿದ್ವು. ಕೊನೆಗೂ ಮನೆಗೆ ಬಂದ ಭರಮಪ್ಪ 'ಏ ಬಸ್ವಿ ಈಗ ನೀನು ಪರ್ಮನೆಂಟಾಗಿ ಅಳದಂಗಾಕ್ಕೈತಿ ತಡೀಲೇ ಎಂದು ತನಗೆ ಕೋಟಿ ರೂಪಾಯಿ ಲಾಟರಿ ಹೊಡಯುವುದೋ ಎಂಬಂತೆ ಖುಷಿಯಿಂದ



ಹೇಳತೊಡಗಿದ. ಒಣಗಿದ ಜಾಲಿ ಕಟ್ಟಿಗೆಯಂತಾಗಿದ್ದ ಬಸ್ವಿಯ ಕಣ್ಣಗಳು ಗುಳಿ ಬಿದ್ದಿದ್ವು. ಆ ರಾತ್ರಿ ಕೂಡ ಉಪವಾಸ ಬೀಳಬೇಕಾಯಿತು. ಬೆಳಗ್ಗೆ ಎದ್ದವನೇ ಸೀದಾ ನಜೀರ್‌ಸಾಬನ ಅಂಗಡಿಗೆ ಬಂದ 'ಏನಪ್ಪ ನಜೀರ್ ಭೈ' ಅಂದ. ಪ್ಲಾಸ್ಟಿಕ್ ಬ್ಯಾಗ್‌ನಲ್ಲಿದ್ದ ಚಿಲ್ಲರೆ ಗಂಟನ್ನು ಎತ್ತಿ ನಜೀರ್ ಸಾಬ್ ಭರಮಪ್ಪನ ಕೈಗಿಟ್ಟ. ಅದನ್ನೆತ್ತಿ ಲುಂಗಿಯಲ್ಲಿ ಕಟ್ಟಿಕೊಂಡು ಭರಮಪ್ಪ ಫಾಜಿಲನ ಅಂಗಡಿಗೆ ಹೋದ. ಇನ್ನೇನು ಗುಟುಕೇರಿಸ ಬೇಕೆನ್ನುವಷ್ಟರಲ್ಲಿ ತೊಗಲು ಗೊಂಬೆಯಂತಿದ್ದ ಮಲ್ಲಿ ಓಣಿಯಲ್ಲಿ ಅಲೆದು ಅಂಗಡಿ ಮುಂದೆ ನಿಂತು ಅಪ್ಪ, ಅವ್ವ ಅವ್ವ ಎಂದು ಏದುಸಿರು ಬಿಡುತ್ತ ನಿಂತಳು. ಗಾಬರಿಯಿಂದ ಗ್ಲಾಸನ್ನು ಕೆಳಗಿಟ್ಟು, ಮಲ್ಲಿಯನ್ನು ಬಗಲಲ್ಲಿಟ್ಟುಕೊಂಡು ಮನೆಗೆ ಓಡಿದ. ಬಸ್ವಿಗೆ ನೋಡಿ ಒಂದು ಕ್ಷಣ ದಂಗಾಗಿ ಹೋದ. ಭರಮಪ್ಪನಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಕೊನೆಗೆ ಯಾರೋ ಹೇಳಿದ ಮಾತಿನಂತೆ ಊರ ಹೊರಗಿನ ನಾಗಜ್ಜನ ಮನೆಗೆ ಹೋದ. ನಾಗಜ್ಜ ಇಡೀ ಊರಿಗೇ ಖ್ಯಾತಿ ಪಡೆದವ. ಎಂಥದ್ದೇ ಗಾಳಿ, ದೆವ್ವ ಇರಲಿ ಇನ್ನೊಮ್ಮೆ ಅದು ಈ ಕಡೆ ಸುಳಿದಂಗೆ ಮಾಡಿಬಿಡುತ್ತಿದ್ದ. ಎಂಥದೇ ಸಮಸ್ಯೆಗಳಿದ್ರೂ ಅಂತ್ರ, ಮಂತ್ರಗಳನ್ನು ಕಟ್ಟುವಾತ. ಕೈಯಲ್ಲಿ ಏನೂ ಇಲ್ಲದ ಊರು ಪ್ರವೇಶಿಸಿದ್ದ ಈತನಿಗೆ ಕೆಲವೇ ದಿನಗಳಲ್ಲಿ ಚಿಕ್ಕಮನೆ, ರೇಡಿಯೋ, ಕಲರ್ ಟಿ.ವಿ., ಫ್ಯಾನು, ಎಲ್ಲವನ್ನೂ ಭಕ್ತರೇ ಮಾಡಿಸಿದ್ದರು. ಮಧ್ಯಾಹ್ನ 12 ಗಂಟೆಯಿಂದ ಎರಡು ಪಾಕೀಟು ಹೊಟ್ಟೆಗೆ ಬಿದ್ರೆ ಮುಗೀತು ಈತ ಏಳೋದೇ ಸೀದ ಸಂಜೆ ಏಳೂವರೆಗೇನೆ. ಸಂಜೆಯಿಂದ ರಾತ್ರಿ